## ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, 15-3-91ರಂದು ಲಿಖಿತ ಮೂಲಕ ಉತ್ತರಿಸುವ 10ನೇ ಪಟ್ಟಿಯಲ್ಲಿರುವ 63 ಪ್ರಶ್ನೆಗಳ ಪೈಕಿ, ಪ್ರಶ್ನೆ ಸಂಖ್ಯೆ 62, 553, 1365, 1343, 1359, 1320, 1224, 1347, 64, 57, 384, 385, 1317, 1348, 1340, 1355 ಈ ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ 47 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ರಾಜ್ಯದ ಬಂದೀಖಾನೆಗಳ ಸಂಖ್ಯೆಯ ಬಗ್ಗೆ.**

61 - ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲು (ಕುಂದಗೋಳ), ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಕರ್ನಾಟಕದಲ್ಲಿ 1983ರಿಂದ ನಿರ್ಮಿಸಲ್ಪಟ್ಟ ಬಂದೀಖಾನೆ, ಉಪಬಂದೀಖಾನೆಗಳೆಷ್ಟು ಹಾಗೂ ಇವುಗಳ ನಿರ್ಮಾಣದ ಬಗ್ಗೆ ಪ್ರತಿಯೊಂದಕ್ಕೂ ತಗುಲಿದ ವೆಚ್ಚವೆಷ್ಟು?*

*ಆ) ಸದರಿ ಬಂದೀಖಾನೆಗಳಲ್ಲಿ ವಾಸವಾದ ಖೈದಿಗಳ ವಾರ್ಷಿಕ ಸರಾಸರಿ ಸಂಖ್ಯೆ ಎಷ್ಟು?*

ಧರ್ಮಸಿಂಗ್, ಗೃಹ ಮಂತ್ರಿಗಳು :

ಅ) 1983ರಿಂದ ಕರ್ನಾಟಕದಲ್ಲಿ ನಿರ್ಮಿಸಲ್ಪಟ್ಟ ಉಪ ಬಂದೀಖಾನೆಗಳು ಎರಡು ಮಾತ್ರ, ಹಾಗೂ ಅವುಗಳ ನಿರ್ಮಾಣಕ್ಕಾಗಿ ತಗುಲಿರುವ ವೆಚ್ಚ ಕೆಳಕಂಡಂತಿರುತ್ತದೆ.

1) ಉಪಕಾರಾಗೃಹ ಔರಾದ್ ರೂ 13,99,000-00

2) ಉಪಕಾರಾಗೃಹ ಕೆ.ಆರ್. ನಗರ ರೂ. 25,10,000-00

ಆ)

1) ಈ ಬಂದೀಖಾನೆಗಳು (ಔರಾದ್) ಇನ್ನು ಖೈದಿಫಳ ವಾಸಕ್ಕೆ ಯೋಗ್ಯವಾಗಿಲ್ಲ.

2) ಇನ್ನೂ ಕಾರಾಗೃಹ ಇಲಾಖೆಯ ವಶಕ್ಕೆ ತೆಗೆದುಕೊಂಡಿಲ್ಲ (ಕೆ.ಆರ್.ನಗರ)

**ಪೊಲೀಸ್ ಠಾಣೆಯ ಬಗ್ಗೆ.**

394 – ಶ್ರೀ ಉಮೇಶ ಕತ್ತಿ (ಹುಕ್ಕೇರಿ) ; ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಕ್ಕೇರಿ ತಾಲ್ಲೂಕಿನ ಪಾಶ್ಚಾಪುರದಲ್ಲಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?*

*ಆ) ಹಾಗಿದ್ದಲ್ಲಿ, ಆದನ್ನು ಎಂದು ಪ್ರಾರಂಭಿಸಲುಗುವುದು?*

ಶ್ರೀ ಧರ್ಮಸಿಂಗ್, (ಗೃಹ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**ಬಿ.ಎಸ್.ಎಸ್.ಕೆ. ಸಹಕಾರಿ ಸಕ್ಕರೆ ಕಾರ್ಖಾನೆಗೆ ಡಿಸ್ಟಲರಿ ಮಂಜೂರಾತಿ.**

844 – ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಬಿ.ಎಸ್.ಎಸ್.ಕೆ. ಸಹಕಾರಿ ಸಕ್ಕರೆ ಕಾರ್ಖಾನೆಗೆ ಡಿಸ್ಟಿಲರೀ ಮಂಜೂರಾತಿ ಮಾಡುವ ಕುರಿತು ಸರ್ಕಾರಕ್ಕೆ ಏನಾದರೂ ಮನವಿ ಪತ್ರಗಳು ಬಂದಿವೆಯೇ?*